KARNATAKA STATE POLICE

# FIRST INFORMATION REPORT

(Under Section 154 Cr.PC)

**Before the Honourable Court of 10th Addl. CMM Court,Mayohall, Bangalore City**

1. **District :** Bengaluru City **Circle/Sub Division :** Pulakeshinagar Sub-Division **PS :** Pulakeshinagar PS

   **Crime No :** 0178/2024 **FIR Date :** 02/06/2024

2. **Act & Section :** IPC 1860 (U/s-506,34,504,332,353)

3. **(a) Occurence of Offence Day :** Sunday **From Date :** 02/06/2024 **To Date :** 02/06/2024

   **From Time :** 16:30:00 **To Time :** 17:15:00

   **(b) Information received at the PS :** 02/06/2024 22:45:00 **Written/Oral :** Written

   **(c) Reasons for Delay in reporting by the Complainant / Informant**

   **(d) General Diary reference Entry No. & Time : 2 ,** 22:45:00

4. **(a) Place of occurence with full address**

   Opp Savera Hotel MM Road ,Near Masqu Road, MM Road Junction Frazer town,Bengaluru City , Karnataka, 560005

   **(b) Distance from PS :** Towards west 1.5 km

   **(c) Village :** FRAZER TOWN **Beat Name :** 7

   **(d) If the place belongs to another jurisdiction,PS. Name :**

   **District :**

5. **Complainant/Informant:**

   **(a) Name :** Chandrakala B J **Father's/Husband's Name :**

| | | | |
|---|---|---|---|
| **(b) Age** | : 30 | **(c) Occupation** | : Police officer |
| **(d) Religion** | : Hindu | **(e) Caste** | : |
| **(f) Fax** | : | **(g) Email** | : |

(h) Phone No. :

(i) Nationality : India

(j) Passport No. :

Date of Issue :

(k) Address : Police Sab inspector,Pulakeshinagar police station , Bengaluru City , Karnataka-560005

(l) Sex: Female

(m) Whether complainant has seen the occurence or merely heard of it :

Seen

6. Details of known/suspected/unknown accused with full particulars(Attach separate sheet if necessary)

| Sl.No. | Name / Father Name / Caste / Address | Type | Person Type | Sex | Age | Occupation |
|---|---|---|---|---|---|---|
| 1 | Arindam Ray(A1) / Nikhil kumar Ray ,No 15 4th main 8th Cross,Nandini Lay OutBengaluru City, Karnataka | Accused | Adult | Male | 34 | |
| 2 | Sharta B(A2) / Basavraju ,No 178, 2nd Cross, Dadapira Lay out,NelamngalaBengaluru City, Karnataka | Accused | Adult | Male | 25 | |
| 3 | Pro Padmini Baroha(A3) / Sita Baroha ,No P4 Gitanjali Hights Geeta nagar Normati, Kamrup,AssamGuwahati city, Assam | Accused | Adult | Female | 30 | |
| 4 | Women Wearing Maroon colour Saree(A4) ,NABengaluru City, Karnataka | Accused | Adult | Female | 30 | |

7. Details of Victims with full particulars

| Sl.No. | Name | Address | Injury Type | Sex | Age | Occupation |
|---|---|---|---|---|---|---|
| 1 | Dilipa PC 21555 | Pulakeshinagar police station, Frazer twon Bengaluru City Karnataka-560005 | | Male | 28 years | |
| 2 | Chandrakala B J | Police sub inspestor, Pulkeshinagar Bengaluru City Karnataka-560005 | | Female | 30 years | |
| 3 | Bhagya WHG | Pulakeshinagar police staion, Pulakeshinagar Bengaluru City Karnataka-560005 | | Male | 40 years | |
| 4 | Darshan PC 21149 | Pulakeshinagar police station, Frazer twon Bengaluru City Karnataka-560005 | | Male | 27 years | |
| 5 | Ashok Tenbad HC 12295 | Pulakeshingara Police staion, Frazer Town Bengaluru City Karnataka-560005 | | Male | 35 years | |

8. **Particulars of Property stolen/involved with value(Attach separate sheet if necessary)**

| Sl.No. | Property Type | Item description | Estimated Value (in Rs.) |
|---|---|---|---|
| 1 | | | |

**Total Value of the property Stolen / Involved :**

9. **Inquest Report/U.D. Case No. if any :**

10. **F.I.R Contents (Attach separate sheet if necessary)**

ಪಿರ್ಯಾದುದಾರರು ನೀಡಿದ ದೂರಿನ ಸಾರಾಂಶವೇನೆಂದರೆ ಈ ದಿನ ದಿನಾಂಕ:02-06-2024 ರಂದು ಸಂಜೆ 04-30 ಗಂಟೆ ಸಮಯದಲ್ಲಿ ಪಿ.ಎಸ್.ಐ ಶ್ರೀ ಪ್ರಸನ್ನ.ಎಸ್ ರವರು  ಠಾಣಾ ಸರಹದ್ದಿನಲ್ಲಿ ಗಸ್ತು ಕರ್ತವ್ಯದಲ್ಲಿರುವಾಗ ಬಾತ್ಮೀದಾರರಿಂದ ಪುಲಕೇಶಿ ನಗರ ಸಾರ್ವಜನಿಕರ ವ್ಯಾಟ್ಸಾಪ್ ಗ್ರೂಪ್ ನಲ್ಲಿ ಇಸ್ರೇಲ್ ದೇಶವು ಪ್ಯಾಲೆಸ್ತೇನ್ ದೇಶದ ಮೇಲೆ ನಡೆಸುತ್ತಿರುವ ಯುದ್ದಕ್ಕೆ ಸಂಬಂಧಿಸಿದಂತೆ ಠಾಣಾ ಸರಹದ್ದಿನ ಎಂ.ಎಂ.ರಸ್ತೆ ಮತ್ತು ಮಾಸ್ಕ್ ರಸ್ತೆಗಳು ಕೂಡುವ ಜಂಕ್ಷನ್ ನಲ್ಲಿ ಸಾರ್ವಜನಿಕರು ಸೇರಿ ಪ್ರತಿಭಟನೆ ನಡೆಸುವ ಬಗ್ಗೆ ಸಂದೇಶಗಳು ರವಾನೆಯಾಗಿದ್ದು ಅದರಂತೆ ಈ ದಿನ ದಿನಾಂಕ:02-06-2024 ರಂದು ಸಂಜೆ 04-30 ಗಂಟೆ ಸಮಯಕ್ಕೆ ಎಂ.ಎಂ.ರಸ್ತೆ ಮತ್ತು ಮಾಸ್ಕ್ ರಸ್ತೆ ಕೂಡುವ ಜಂಕ್ಷನ್ ಮತ್ತು ಪಾದಚಾರಿ ಮಾರ್ಗದಲ್ಲಿ ಸುಮಾರು 12-14 ಜನರು ಕೈಯಲ್ಲಿ ಭಿತ್ತಿಪತ್ರಗಳನ್ನು ಹಿಡಿದುಕೊಂಡು ಇಸ್ರೇಲ್ ಮತ್ತು ಪ್ಯಾಲಿಸ್ತೇನ್ ದೇಶಗಳ ನಡುವೆ ನಡೆಯುತ್ತಿರುವ ಯುದ್ದದಲ್ಲಿ ಪ್ಯಾಲಿಸ್ತೇನಿಯರ ಮೇಲೆ ನಡೆಯುತ್ತಿರುವ ಹಿಂಸಾಚಾರವನ್ನು ವಿರೋಧಿಸಿ ಪ್ರತಿಭಟನೆಯನ್ನು ನಡೆಸುತ್ತಿದ್ದಾರೆ ಎಂಬ ಬಾತ್ಮೀ ಬಂದಿರುವುದಾಗಿ ನಾನು ಸದರಿ ಮಾಹಿತಿಯನ್ನು ಮೇಲಾಧಿಕಾರಿಯವರಿಗೆ ತಿಳಿಸಿರುವುದಾಗಿ ಕೂಡಲೇ ಸ್ಥಳಕ್ಕೆ ಬರುವಂತೆ ಕರೆದಿದ್ದು, ಅದರಂತೆ ನಾನು ಮತ್ತು ಸಿಬ್ಬಂದಿಗಳಾದ ಮ.ಹೆಚ್.ಜಿ. ಶ್ರೀಮತಿ ಭಾಗ್ಯ ಹಾಗೂ ಸಿಬ್ಬಂದಿಯವರಾದ ಪವನ್ ಕುಮಾರ್

ಹೆಚ್.ಸಿ.8568, ಅಶೋಕ್ ತೆಂಬದ್, ಹೆಚ್.ಸಿ.12295, ದರ್ಶನ್, ಪಿ.ಸಿ.21149, ದಿಲೀಪ್, ಪಿ.ಸಿ.21555, ಮಂಜುನಾಥ ಬೇವಿನಮಟ್ಟಿ, ಪಿ.ಸಿ.20445, ಶಿವಾನಂದ ಶಿವಣ್ಣನವರ್, ಪಿ.ಸಿ.20885, ನೂತನ್ ಪ್ರಸಾದ್, ಪಿ.ಸಿ.20815ರವರುಗಳು ಸ್ಥಳಕ್ಕೆ ಬಂದರು. ಸ್ಥಳದಲ್ಲಿ ಪಿ.ಎಸ್.ಐ ರವರು ನಮಗೆಲ್ಲಾ ಮತ್ತೊಮ್ಮೆ ವಿಷಯವನ್ನು ತಿಳಿಸಿ ಪ್ರತಿಭಟನೆ ಮಾಡುತ್ತಿದ್ದವರನ್ನು ನೋಡಲಾಗಿ ಮಾಸ್ಕ್ ರಸ್ತೆ ಮತ್ತು ಎಂ.ಎಂ.ರಸ್ತೆ ಜಂಕ್ಷನ್ ಬಳಿ ಸುಮಾರು 12-14 ಜನ ಗಂಡಸರು ಮತ್ತು ಹೆಂಗಸರು ಸೇರಿದ್ದು ಕೈಯಲ್ಲಿ ಭಿತ್ತಿ ಪತ್ರಗಳನ್ನು ಹಿಡಿದುಕೊಂಡಿದ್ದರು ಅವರು ಹಿಡಿದುಕೊಂಡಿದ್ದ ಭಿತ್ತಿ ಪತ್ರಗಳಲ್ಲಿ ಆಂಗ್ಲ ಭಾಷೆಯಲ್ಲಿ 15000 Children Have Died, Govt of India Stop Buying Israeli Weapons, 15000 Children Slaughtered by Israel, Boycott Divest Sanction, End the Occupation, From the River to the SEA ಎಂಬುದಾಗಿ ಬರೆದಿತ್ತು. ಸದರಿ ಭಿತ್ತಿ ಪತ್ರಗಳನ್ನು ಹಿಡಿದುಕೊಂಡು ಪ್ರತಿಭಟನೆಯನ್ನು ನಡೆಸುತ್ತಿರುವವರು, ಮೇಲ್ಕಂಡಂತೆ ಪ್ರತಿಭಟನೆ ನಡೆಸಲು ಸರ್ಕಾರದಿಂದ ಯಾವುದೇ ರೀತಿಯ ಅನುಮತಿಯನ್ನು ಪಡೆದುಕೊಳ್ಳದೇ ಇಸ್ರೇಲ್ ಮತ್ತು ಪ್ಯಾಲೆಸ್ತೀನ್ ದೇಶಗಳ ನಡುವೆ ನಡೆಯುತ್ತಿರುವ ಯುದ್ಧವನ್ನು ವಿರೋಧಿಸಿ ಹಾಗೂ ಪ್ಯಾಲೆಸ್ತೀಯರ ಮೇಲಿನ ಹಿಂಸಾಚಾರವನ್ನು ವಿರೋಧಿಸಿ ಪ್ಯಾಲೆಸ್ತೀನ್ ಪರವಾಗಿ ಹಲವಾರು ಘೋಷಣೆಗಳನ್ನು ಕೂಗುತ್ತಿರುವುದು ಕಂಡು ಬಂದಿದ್ದು, ಪಿ.ಎಸ್.ಐ ರವರು ಪ್ರತಿಭಟನಾ ನಿರತರ ಬಳಿಗೆ ಹೋಗಿ ಘನ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:5781/2021 ರಲ್ಲಿ ಘನ ನ್ಯಾಯಾಲಯವು ಬೆಂಗಳೂರು ನಗರದಲ್ಲಿ ಯಾವುದೇ ಸಂಘಟನೆಗಳು ಮತ್ತು ವ್ಯಕ್ತಿಗಳು ಮಾಡುವ ಪ್ರತಿಭಟನೆ/ಧರಣಿ/ಮೆರವಣಿಗೆಯಿಂದ ಸಾರ್ವಜನಿಕರಿಗೆ ಪ್ರತಿ ನಿತ್ಯ ಆಗುತ್ತಿರುವ ತೊಂದರೆಯನ್ನು ಗಮನಿಸಿ ಬೆಂಗಳೂರು ನಗರದಲ್ಲಿ ಫ್ರೀಡಂಪಾರ್ಕ್ ಸ್ಥಳದಲ್ಲಿ ಹೊರತುಪಡಿಸಿ ಬೇರೆ ಯಾವುದೇ ಜಾಗದಲ್ಲಿ ಪ್ರತಿಭಟನೆ/ಧರಣಿ/ಮೆರವಣಿಗೆಗಳನ್ನು ಮಾಡಬಾರದೆಂದು ಆದೇಶಿಸಿರುವುದಾಗಿ ತಿಳಿಸಿ ಈಗ ತಾವು ಮಾಡುತ್ತಿರುವ ಪ್ರತಿಭಟನೆಯು ಕಾನೂನು ಬಾಹಿರವೆಂದು ತಿಳಿಸಿ ಕೂಡಲೇ ಪ್ರತಿಭಟನೆಯನ್ನು ನಿಲ್ಲಿಸುವಂತೆ ತಿಳಿ ಹೇಳಿದರು ಸಹ ಪ್ರತಿಭಟನಾ ನಿರತರು ನಮ್ಮ ಕೇಳದೇ ಮಾಸ್ಕ್ರಸ್ತೆ ಮತ್ತು ಎಂ.ಎಂ ರಸ್ತೆ ಜಂಕ್ಷನ್ನ ಪಾದಚಾರಿ ಮಾರ್ಗ ಮತ್ತು ರಸ್ತೆಗಳ ಮೇಲೆಯೇ ನಿಂತುಕೊಂಡು ಸಾರ್ವಜನಿಕ ಸಂಚಾರಕ್ಕೆ ಅಡಚಣೆಯುಂಟು ಮಾಡಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಯಾವುದೇ ಪೂರ್ವಾನುಮತಿಯನ್ನು ಪಡೆಯದೇ ಪ್ರತಿಭಟನೆ ಮಾಡುತ್ತಿದ್ದವರಲ್ಲಿ ಸುಮಾರು 3-4 ಜನ ಎಂ.ಎಂ.ರಸ್ತೆಯ ಸವೇರ ಹೋಟೆಲ್ನ ಬಳಿಗೆ ಪ್ಲೇ ಕಾರ್ಡಗಳನ್ನು ಹಿಡಿದುಕೊಂಡು ಓಡಿ ಹೋರಟರು. ನಾನು ಮತ್ತು ದರ್ಶನ್, ಅಶೋಕ್ ,ದಿಲೀಪ್, ಶ್ರೀಮತಿ ಭಾಗ್ಯಾ ರವರುಗಳು ಅವರನ್ನು ಹಿಂಭಾಲಿಸಿಕೊಂಡು ಹೋದೆವು. ಸದರಿ ಪ್ರತಿಭಟನಾಕಾರರು ಸವೇರಾ ಹೋಟೆಲ್ನ ಮುಂಭಾಗದ ರಸ್ತೆಯಲ್ಲಿ ಮೇಲ್ಕಂಡ ಬಿತ್ತಿಪತ್ರಗಳನ್ನು ಹಿಡಿದುಕೊಂಡು ಜೋರಾಗಿ ಘೋಷಣೆಗಳನ್ನು ಕೂಗುತ್ತಿದ್ದರು. ನಾನು ಮತ್ತು ಸಿಬ್ಬಂದಿಯವರುಗಳು ಅವರಿಗೆ ಮೇಲ್ಕಂಡಂತೆಯೇ ತಿಳಿಸಿ ಹೇಳಿದರೂ ಕೇಳದೆ ನಮ್ಮೊಂದಿಗೆ ಜೋರಾದ ಧ್ವನಿಯಲ್ಲಿ ಕೂಗಾಡುತ್ತಾ, ಇಬ್ಬರು ಹೆಂಗಸರು ಮತ್ತು ಇಬ್ಬರು ಗಂಡಸರು ಭಿತ್ತಿ ಪತ್ರಗಳನ್ನು ಹಿಡಿದುಕೊಂಡು ಘೋಷಣೆ ಕೂಗುತ್ತಾ ಪ್ರತಿಭಟನೆ ಮುಂದುವರೆಯಿಸಿದರು ಅಲ್ಲದೆ ಸಮೀಪದ ಮಸೀದಿಯಲ್ಲಿ ಸಂಜೆ 05:00 ಗಂಟೆಯ ಪ್ರಾರ್ಥನೆಗೆ ಹೋಗುತ್ತಿದ್ದ ಸಾರ್ವಜನಿಕರಿಗೆ ಜೋರಾಗಿ ಕುಗುತ್ತಾ ಬನ್ನಿ ಬನ್ನಿ ನಮ್ಮ ಜೊರೆ ಕೈ ಜೋಡಿಸಿ ಎಂದು ಸಾರ್ವಜನಿಕರಿಗೆ ದುಷ್ಪ್ರೇರಣೆ ಮಾಡುತ್ತಿದ್ದರು. ಇದರಿಂದ ನಾವು ಅಲ್ಲಿದ್ದ ಪುರುಷರನ್ನು ವಶಕ್ಕೆ ಪಡೆಯಲು ಪ್ರಯತ್ನಿಸಿದಾಗ ಇಬ್ಬರು ಹೆಂಗಸರು ನಮ್ಮ ಮೇಲೆ ಹಲ್ಲೆ ಮಾಡಿ ಅವರನ್ನು ನಮ್ಮಿಂದ ಬಿಡಿಸಿ ಎಲ್ಲರೂ ನಮ್ಮನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಇಂಗ್ಲೀಷ್ನಲ್ಲಿ ಯು ಬ್ಲಡಿ ನಾನ್ಸೆನ್ಸ್, ಫಕ್ಯೂ, ಬ್ಲಡಿ ಪೊಲೀಸ್, ಡೊಂಟ್ ನೋ ಕಾನ್ಸ್ಟಿಟ್ಯೂಷನ್, ಬ್ಲಡಿ ರಾಸ್ಕಲ್ಸ್ ನಮ್ಮನ್ನು ಕೇಳಲು ನೀವ್ಯಾರು ವೀ ಡೋಂಟ್ ಸ್ಪೇರ್ ಯು" ಇತ್ಯಾದಿಯಾಗಿ ಅವಾಚ್ಯ ಶಬ್ದಗಳಿಂದ ಬೈದು ಎಲ್ಲರೂ ಸೇರಿಕೊಂಡು ಮತ್ತೆ ನಮ್ಮಗಳ ಮೇಲೆ ಕೈಗಳಿಂದ ಹಲ್ಲೆ ಮಾಡಿ ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿದರು, ನಾವು ಎಲ್ಲರನ್ನು ವಶಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸಿದಾಗ ಅವರೆಲ್ಲರೂ ಮಾಸ್ಕ್ ರಸ್ತೆ ಮತ್ತು ಎಂ.ಎಂ. ರಸ್ತೆಯ ಜಂಕ್ಷನ್ನಲ್ಲಿ ಪ್ರತಿಭಟನೆ ನಡೆಯುತ್ತಿದ್ದ ಸ್ಥಳಕ್ಕೆ ಓಡಿ ಬಂದು ಅಲ್ಲಿದ್ದವರೊಂದಿಗೆ ಸೇರಿಕೊಂಡರು. ನಾವು ಹಿಂದೆಯೇ ಪ್ರತಿಭಟನೆಯ ಸ್ಥಳಕ್ಕೆ ಬಂದೆವು. ಪ್ರತಿಭಟನಾ ಸ್ಥಳದಲ್ಲಿದ್ದ ಅಧಿಕಾರಿ ಮತ್ತು ಸಿಬ್ಬಂದಿಯವರುಗಳು ಸ್ಥಳದಲ್ಲಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದವರು ಸಾರ್ವಜನಿಕ ಸಂಚಾರಕ್ಕೆ ಅಡಚಣೆಯನ್ನುಂಟು ಮಾಡಿ, ಸಾರ್ವಜನಿಕರಿಗೆ ಉಪದ್ರವ ಕಾರಿಯಾಗಿ ವರ್ತಿಸಿ ಘನ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ, ಸಾರ್ವಜನಿಕ ಸ್ಥಳದಲ್ಲಿ ಪೂರ್ವಾನುಮತಿ ಇಲ್ಲದೇ ಪ್ರತಿಭಟನೆ ಮಾಡಬಾರದೆಂದು ತಿಳಿಸಿ ಹೇಳಿದರು ಕೂಡ ಪ್ರತಿಭಟನಾ ನಿರತರು ತಮ್ಮ ಪ್ರತಿಭಟನೆಯನ್ನು ಮುಂದುವರೆಸಿದ್ದರಿಂದ ಪ್ರತಿಭಟನಾ ಸ್ಥಳದಲ್ಲಿ ಮಸೀದಿ ಇದ್ದು ಸೂಕ್ಷ್ಮ ಸ್ಥಳವಾಗಿದ್ದರಿಂದ ಸ್ಥಳದಲ್ಲಿ ಹೆಚ್ಚಿನ ಸಾರ್ವಜನಿಕರು ಸೇರಿದ್ದರಿಂದ ಮುಂಜಾಗ್ರತ ಕ್ರಮಕ್ಕಾಗಿ ಮೇಲ್ಕಂಡ ವ್ಯಕ್ತಿಗಳನ್ನು ಠಾಣೆಗೆ ಕರೆದುಕೊಂಡು ಹೋದರು. ನಾನು ಮತ್ತು ನನ್ನೊಂದಿಗೆ ಹಲ್ಲೆಗೆ ಒಳಗಾಗಿದ್ದ ಸಿಬ್ಬಂದಿಯವರುಗಳು ಬೌರಿಂಗ್ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡು ಬಂದಿದ್ದು, ಅಷ್ಟರಲ್ಲಿ ಪಿ.ಎಸ್.ಐ ರವರು ಪ್ರತಿಭಟನೆಯಲ್ಲಿ ನಿರತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ನೋಟೀಸ್ ಕೊಟ್ಟು ಕಳುಹಿಸಿದ್ದರು. ನಾವು ಅವರೆಲ್ಲರ ಭಾವಚಿತ್ರಗಳನ್ನು ನೋಡಿ ನಮ್ಮ ಮೇಲೆ ಹಲ್ಲೆ ಮಾಡಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದವರನ್ನು ಗುರ್ತಿಸಿದ್ದು, ಅವರುಗಳೆಂದರೆ, 1) ಡಾ:ಆರಿಂದಂ ರಾಯ್ ಬಿನ್ ನಿಖಿಲ್ ಕುಮಾರ್ ರಾಯ್, 34 ವರ್ಷವಾಸ:ನಂ.15, 4ನೇ ಮೇನ್, 8ನೇ ಕ್ರಾಸ್,ನಂದಿನಿ ಲೇ ಔಟ್, ಬೆಂಗಳೂರು ನಗರ 2) ಶರತ್ ಬಿ ಬಿನ್ ಬಸವರಾಜು,

25 ವರ್ಷ ವಾಸ:ನಂ.178, 2ನೇ ಕ್ರಾಸ್, ದಾದಾಪೀರ್ ಲೇ ಔಟ್, ನೆಲಮಂಗಲ, ಬೆಂಗಳೂರು 3) ಪ್ರೋ.ಪದ್ಮಿನಿ ಬರೂಹ ತಂದೆ ಸೀತಾ ಬರೂಹ, 30 ವರ್ಷ ವಾಸ: ಪ್ಲಾಟ್. ನಂ.ಪಿ-4, ಗೀತಾಂಜಲಿ ಹೈಟ್ಸ್, ಗೀತಾ ನಗರ, ನೂರ್ಮಾಟಿ, ಕಾಮರೂಪ್ ಮೆಟ್ರೋ, ಗುವಾಹಟಿ ಅಸ್ಸಾಂ ಹಾಲಿ: ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ, ನಾಗರಭಾರಿ ಸರ್ಕಲ್, ಬೆಂಗಳುರು-72 ಇವರುಗಳೊಂದಿಗೆ ಇದ್ದ ನಮ್ಮ ಮೇಲೆ ಹಲ್ಲೆ ಮಾಡಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ ಮೆರೂನ್ ಬಣ್ಣದ ಬಟ್ಟೆಯನ್ನು ಧರಿಸಿದ್ದ ಮಹಿಳೆ ಸ್ಥಳದಿಂದ ತಪ್ಪಿಸಿಕೊಂಡು ಹೋಗಿರುತ್ತಾಳೆ. ಸದರಿಯವರುಗಳ ಮತ್ತು ತಪ್ಪಿಸಿಕೊಂಡು ಹೋಗಿರುವ ಮೆರೂನ್ ಬಣ್ಣದ ಬಟ್ಟೆಯನ್ನು ಧರಿಸಿದ್ದ ಮಹಿಳೆ ವಿರುದ್ದ ನಮ್ಮಗಳ ಮೇಲೆ ಹಲ್ಲೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದರಬಗ್ಗೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ನನ್ನ ವರದಿಯನ್ನು ಟೈಪ್ ಮಾಡಿಸಿ ಕೊಟ್ಟಿರುವ ವರದಿ ಇತ್ಯಾದಿ.

11. **(a) Action Taken :** Investigation

**(b) Is the F.I.R read over and explained in his/her language to the complainant and a copy given to the complainant free of cost? :** Yes

**(c) If the Police Officer does not proceed to the spot for investigation or if he declines to investigate.**

**U/S 157 Cr.PC provision (a)or (b)the reasons there of should be mentioned :**

**Action taken**

12. **Signature/Thumb impression of the complainant**



13. **Date and time of dispatch to the Court :** 02/06/2024 23:50:00

14. **Name of PC/HC who carried the FIR to the Court :** KRISHNE GOWDA H L , HC 10268

**Read Over and Found to be correct**

**Date and Time :** 02/06/2024 23:40:00

**Signature of the SHO**



**Name:** SOMASHEKHARA L K - PSI

**Copy to :** Superintendent of Police/Commissioner of Police